


ಸರೋಜಾದೇವಿ ಅವರಿಗೂ ಅದು ತಾರಾ ಮೆರುಗನ್ನು ತುಂಬಿತು. ಅಲ್ಲಿಂದ ಅವರ ಯುಗವೇ ಭಾರತದ ಸಿನಿ ಇತಿಹಾಸದಲ್ಲಿ ನಿರ್ಮಾಣವಾದಂತೆ ಆಯಿತು. 161 ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ ಅಪರೂಪದ ಕಲಾವಿದೆ. ಮೃದುಸ್ವಭಾವದ ಅವರಲ್ಲಿ ಪ್ರತಿಭೆ ಮತ್ತು ಸೌಂದರ್ಯ ಎರಡೂ ಮೈದಳೆದು ನಿಂತಿತ್ತು. ಅದೇ ಅವರ ವ್ಯಕ್ತಿತ್ವಕ್ಕೆ ಶೋಭೆ ತಂದಿತ್ತು.

ಕನ್ನಡ ಸಿನಿಮಾದಲ್ಲಿ ವರನಟ ರಾಜ್ ಕುಮಾರ್ ಸೇರಿದಂತೆ ಅಂದಿನ ಪ್ರಸಿದ್ಧ ನಟರಾದ ಉದಯ್ ಕುಮಾರ್, ಕಲ್ಯಾಣ್ ಕುಮಾರ್ ಅವರ ಜೊತೆ ನಾಯಕಿಯಾಗಿದ್ದರು. ಕಾಲಿವುಡ್‌ನ ದಿಗ್ಗಜ ನಟರಾದ ಎಂಜಿಆರ್ ಜೊತೆ 26, ಶಿವಾಜಿ ಗಣೇಶನ್ ಜೊತೆ 22 ಸಿನಿಮಾಗಳಲ್ಲಿ ನಾಯಕಿಯಾಗಿ ನಟಿಸಿದರು. ಆ ಕಾಲದಲ್ಲಿ ತೆಲುಗು ಮತ್ತು ಹಿಂದಿ ಚಿತ್ರರಂಗದಲ್ಲೂ ತಮ್ಮದೇ ಬಿಂಬವನ್ನು ಮೂಡಿಸಿದ ಖ್ಯಾತಿ ಸರೋಜಾದೇವಿಯವರದು. ಬಾಲಿವುಡ್‌ನಲ್ಲಿ ದಿಲೀಪ್ ಕುಮಾರ್, ರಾಜೇಂದ್ರ ಕುಮಾರ್, ಶಮ್ಮಿ ಕಪೂರ್, ಸುನಿಲ್ ದತ್ ಅವರ ಜೊತೆ ನಾಯಕಿಯಾಗಿ ತೆರೆಯನ್ನು ಹಂಚಿಕೊಂಡಿದ್ದಾರೆ. ರಾಜ್ ಕುಮಾರ್ ಜೊತೆ ನಟಿಸಿದ್ದ 'ಭಾಗ್ಯವಂತರು' ಮತ್ತು 'ಬಬ್ರುವಾಹನ' ಅಪಾರ ಜನಮನ್ನಣೆಯನ್ನು ತಂದುಕೊಟ್ಟ ಚಿತ್ರಗಳು. 'ಕಿತ್ತೂರು ಚೆನ್ನಮ್ಮ' ಅಭಿನಯದ ವೀರಗಾಥೆ ಸರೋಜಾದೇವಿ ಅವರನ್ನು ಈಗಲೂ ಶಾಲೆ ಕಾಲೇಜುಗಳ ರಂಗದ ಮೇಲೆ ಸ್ಮರಿಸುವಂತೆ ಮಾಡುತ್ತಿದೆ.

### ತಾರೆಗೆ ತಾಯಿಯೇ ಪೋಷಕಿ

ಬಾಲ್ಯದಲ್ಲಿಯೇ ಅವರಿಗೆ ಕಲೆಯ ಬಗ್ಗೆ ಅಪಾರ ಒಲವು ಇತ್ತು. ಬೆಂಗಳೂರಿನ ಸೆಂಟ್‌ಥೆರೆಸಾ ಶಾಲೆಯಲ್ಲಿ ಓದಿದ ಅವರಿಗೆ ಕಲೆಯ ಅಭಿರುಚಿಯನ್ನು ಬೆಳೆಸಿಕೊಳ್ಳಲು ಸಾಧ್ಯ ಆಯಿತು. ತಂದೆ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಸರೋಜಾ ಅವರ ಕಲಾ ಸೇವೆಗೆ ನೀರೆರೆದು ಪೋಷಿಸಿದ್ದು ತಾಯಿ ರುದ್ರಮ್ಮ. ಮಗಳ ನೃತ್ಯ ಕಲಿಕೆಗೆ ಬೆನ್ನೆಲುಬಾಗಿ ನಿಂತರು. ತಮ್ಮ ಮಗಳನ್ನು ಡಾನ್ಸ್ ತರಗತಿಗೆ ಅವರೇ ಕರೆದುಕೊಂಡು ಹೋಗುತ್ತಿದ್ದರು. ಆ ವಯಸ್ಸಿನಲ್ಲಿ ಹಾಡುಗಾರಿಕೆ ಅಪೇಕ್ಷಿಸುತ್ತಿದ್ದ ಬಾಲಕಿ ಸರೋಜಾದೇವಿಯನ್ನು ಗಾಯನ ಸ್ಪರ್ಧೆಗೂ ಹುರಿದುಂಬಿಸಿ ಕಳಿಸುತ್ತಿದ್ದರು. 1953ರಲ್ಲಿ 'ಶ್ರೀರಾಮ ಪೂಜಾ' ಹಾಸ್ಯಪಾತ್ರವೊಂದಕ್ಕೆ ಆಕಸ್ಮಿಕವಾಗಿ ಬಣ್ಣ ಹಚ್ಚಿದರು. ಸಾಂಪ್ರದಾಯಿಕ ಕುಟುಂಬದಲ್ಲಿ ಬೆಳೆದ ಸರೋಜಾದೇವಿ ಅವರಿಗೆ ಆ ಸಂದರ್ಭ ನಿರ್ಣಾಯಕ ಘಟ್ಟವಾಗಿತ್ತು. ಆಗ ರುದ್ರಮ್ಮ ಅವರು ನೀಡಿದ ಪ್ರೇರಣೆಯ ಪೋಷಣೆ ಜೀವಧಾರೆಗಾಗಿ ಸಿನಿ ತಾರಾ ಲೋಕದಲ್ಲಿ ಧ್ರುವತಾರೆಯಂತೆ ಬೆಳೆಸಿತು.

ಅಂದು ತನ್ನ ತಾಯಿ ಹೇಳಿದ ಕುಟುಂಬದ ಘನತೆ, ಜೀವನದ ಮೌಲ್ಯವನ್ನು ಜೀವನದುದ್ದಕ್ಕೂ ರೂಢಿಸಿಕೊಂಡರು ಸರೋಜಾದೇವಿ. ಚಿತ್ರೋದ್ಯಮದಲ್ಲಿ ಬೆಳೆಯುವ ದೊಡ್ಡಕನಸೇನೂ ಕಾಣದ ಅವರು ಎಂದೂ ವಿವಾದಗಳಿಗೆ ತುತ್ತಾಗದೆ ದೊಡ್ಡದಾಗಿ ಬೆಳೆಯಲು ಸಾಧ್ಯವಾಯಿತು. ಸಾಂಪ್ರದಾಯಿಕ ಮತ್ತು ಚಾರಿತ್ರಿಕ ಮಹತ್ವದ ಸಿನಿಮಾಗಳಿಗೆ ಜೀವ ಕಳೆಯನ್ನು ತುಂಬಿದ ಅವರು ಇಂದಿಗೂ ಜನಮನದ ತಾರೆಯಾಗಿ ಬೆಳಗುತ್ತಿದ್ದಾರೆ.

### ದಶವಾರದಲ್ಲಿ ಅಜರಾಮರ!

ಬಿ. ಸರೋಜಾದೇವಿ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಜುಲೈ 14. 2025ರಂದು ನಿಧನವಾದರು. 87 ವರ್ಷದ ಅವರು ವಯೋಸಹಜ ಆರೋಗ್ಯ ತೊಂದರೆ ಎದುರಿಸುತ್ತಿದ್ದರು. ತಮ್ಮ ಈ ಇಳಿಹೊತ್ತಿನಲ್ಲೂ ಉತ್ಸಾಹ ಕಳೆದುಕೊಂಡಿರಲಿಲ್ಲ. ಸೌಂದರ್ಯದ ಗಣಿಯಂತಿದ್ದ ಅವರ ಮುಖದಲ್ಲಿ ಯೌವನದ ನವಿಲು ನಲಿಯುತ್ತಿತ್ತು. ಆ ಕಳೆಯನ್ನು ಪ್ರೀತಿಸುವ ಅವರು ತಮ್ಮ ವಯಸ್ಸಿನ ವಿಷಯದಲ್ಲಿ ಗುಟ್ಟನ್ನು ಇಟ್ಟೇ ನಗುತ್ತಿದ್ದರು. 1955ರಿಂದ 1984ರವರೆಗೆ ನಾಲ್ಕು ಭಾಷೆಗಳಲ್ಲಿ ನಾಯಕಿಯಾಗಿ ನಟಿಸಿದ್ದರು.

'ಕಿತ್ತೂರು ಚೆನ್ನಮ್ಮ', 'ಭಕ್ತ ಕನಕದಾಸ', 'ಮಹಾಕವಿ ಕಾಳಿದಾಸ' ಅವರ ಜನಪ್ರಿಯತೆಯನ್ನು ಮತ್ತಷ್ಟು ಹೆಚ್ಚಿಸಿದವು. ಸರೋಜಾದೇವಿ ಅವರಿಗೆ ಪದ್ಮಶ್ರೀ, ಪದ್ಮಭೂಷಣ ಪ್ರಶಸ್ತಿಯನ್ನು ಭಾರತ ಸರ್ಕಾರ ನೀಡಿದೆ. ಬೆಂಗಳೂರು ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಗೌರವವನ್ನು ನೀಡಿತ್ತು, ತಮಿಳುನಾಡು ಸರ್ಕಾರ ಕಲೈಮಾಮಣಿ ಪುರಸ್ಕಾರವನ್ನು ನೀಡಿ ಗೌರವಿಸಿತು. ಜೀವಮಾನದ ಸಾಧನೆಗೆ ರಾಜ್‌ಕುಮಾರ್ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರ ನೀಡಿದೆ.

### ಅಭಿನಯ ಸರಸ್ವತಿ ನಟಿಸಿದ ಪ್ರಮುಖ ಸಿನಿಮಾಗಳು

ಕನ್ನಡದಲ್ಲಿ 'ರತ್ನಗಿರಿ ರಹಸ್ಯ', 'ಸ್ಕೂಲ್ ಮಾಸ್ಟರ್', 'ವಿಜಯನಗರದ ವೀರಪುತ್ರ', 'ಲಕ್ಷ್ಮೀ, ಸರಸ್ವತಿ', 'ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮಾ', 'ಶ್ರೀ ಶ್ರೀನಿವಾಸ ಕಲ್ಯಾಣ'. ತಮಿಳುನಲ್ಲಿ 'ನಾಡೋಡಿ ಮನ್ನನ್', 'ಅನ್ಬೇವಾ', 'ಎಂಗವೀಟ್ಟು ವಿಳ್ಳೈ', 'ತಿರುಡಾದೆ', 'ಪಡಕೋಟಿ', 'ಆಲಯಮಣಿ', 'ಪಾಲುಂ ಪಳಮುಂ', 'ಪುದಿಯ ಪರವೈ'. ತೆಲುಗಿನಲ್ಲಿ 'ಭೂಕೈಲಾಸ್', 'ಪೆಳ್ಳಿ ಸಂದಡಿ', 'ಜಗದೇಕ ವೀರುನಿ ಕಥಾ'. ಹಿಂದಿಯಲ್ಲಿ 'ಒಪೇರಾ ಹೌಸ್', 'ಪರೀಕ್ಷಾ', 'ಪ್ಯಾರ್ ಕಿಯಾ ತೊ ಡರ್ನಾ ಕ್ಯಾ'.